ಅಸಹ್ಯವಾಗಿ ವರ್ಣಿಸುವಾಗ ಯಮುನಕ್ಕ ಸಾಕಷ್ಟು ಮುಜುಗರ ಮತ್ತು ನಾಚಿಕೆ ಅನುಭವಿಸಿದ್ದಾಳೆ. ಅಲ್ಲಿ ಬೊಮ್ಮಿಯ ಮಾತುಗಳನ್ನು ಕೇಳುತ್ತಿರುವ ಮೂರನೆಯ ವ್ಯಕ್ತಿ ಪದ್ಮ ಒಬ್ಬಳೇ ಎನ್ನುವುದೇ ಸಮಾಧಾನ. ಪದ್ಮಳಿಗೆ ಬೊಮ್ಮಿ ಎಲ್ಲವನ್ನೂ ಹೇಳಿಯೇ ಇರುತ್ತಾಳೆ ಎಂದು ಯಮುನಕ್ಕನಿಗೆ ಗೊತ್ತೇ ಇದ್ದುದರಿಂದ ಪದ್ಮ ಕೇಳಿಸಿಕೊಳ್ಳುತ್ತಾಳೆ ಎಂಬ ಭಯ ಯಾವತ್ತೋ ಹೊರಟುಹೋಗಿತ್ತು. ಆದರೆ ಬೊಮ್ಮಿ ತಮ್ಮ ಮನೆಗಳ ಹತ್ತಿರ ದಾರಿಯಲ್ಲಿ ಯಾರಾದರೂ ಊರವರು ಓಡಾಡುವಾಗ ಫಕ್ಕನೆ ಓಡಿಬಂದು ಯಮುನಕ್ಕನ ಅಂಗಳದಲ್ಲಿ ನಿಂತು ಉಗುಳಿ ಉಗುಳಿ ಯಮುನಕ್ಕನ ರಹಸ್ಯವನ್ನು ಬಯಲುಪಡಿಸುತ್ತಾ, ನಡುನಡುವೆ 'ಈ ರಂಡೆ ಏನು ಸಾಮಾನ್ಯದವಳಾ?', 'ಈ ಮುಂಡೆ ಈಗ ಸುಭಗಳ ಹಾಗೆ ಮೆರೆಯುತ್ತಾಳೆ. ಇವಳ ಚರಿತ್ರೆ ಗೊತ್ತುಂಟಾ ನಿಮಗೆ?' ಎಂದು ಬೈಗಳ ಒಗ್ಗರಣೆ ಹಾಕುತ್ತಾ ರಸಭರಿತವಾಗಿ ಯಮುನಕ್ಕನ ಬಾಲ್ಯದ ಪ್ರೇಮಕಥೆಯನ್ನು ಅತ್ಯಂತ ಹೇಸಿಗೆ ಹುಟ್ಟಿಸುವ ರೀತಿಯಲ್ಲಿ ವರ್ಣಿಸುತ್ತಿದ್ದಳು. ಹದಿಹರೆಯದ ಆ ಪ್ರೇಮ ಸಂಬಂಧ ಆ ಕಾಲದಲ್ಲಿ ಹುಟ್ಟಿಸಿದ್ದ ಮಧುರವಾದ ಭಾವನೆಗಳನ್ನು ಯಮುನಕ್ಕ ಅದರ ಆಘಾತ ಅನುಭವಿಸಿದ ತಕ್ಷಣವೇ ಹೊಸಕಿ ಹಾಕಿದ್ದರೂ, ಈಗ ಬೊಮ್ಮಿಯ ಬಾಯಿಯಲ್ಲಿ ಅದರ ವಿಕೃತ ಕಥನವನ್ನು ಕೇಳಿದಾಗ ಅಸಹನೀಯ ಹೇಸಿಗೆಯಾಗುತ್ತಿತ್ತು. ಕೊನೆಗೆ ಅದನ್ನೂ ಮೀರಿ ಯಂತ್ರವೊಂದರ ಭೋರ್ಗರೆತದಿಂದ ಅನುಭವಿಸುವ ಹಿಂಸೆಯಂತೆ ಬೊಮ್ಮಿಯ ಕಿರಿಚಾಟಗಳನ್ನು ಶಬ್ದ ಮಾಲಿನ್ಯ ಎಂಬಷ್ಟೇ ಪರಿಗಣಿಸತೊಡಗಿದಳು.

ಬೊಮ್ಮಿಯ ದಿನನಿತ್ಯದ ಕಿರಿಚಾಟಗಳಿಂದಾಗಿ ಯಮುನಕ್ಕನ ಯೌವನದ ಕತೆ ಊರಿನವರಿಗೆಲ್ಲಾ ಗೊತ್ತೇ ಇದ್ದಿತು.

ಯಮುನಕ್ಕ ಬೊಮ್ಮಿಯ ಮಾತುಗಳನ್ನು ಬಗೆದು ನೋಡಿದಳು. ತನ್ನ ಇಂದಿನ ಸ್ಥಿತಿಗೆ ತನ್ನ ಬಾಲ್ಯದ ಅಪರಾಧ ಕಾರಣವಿರಬಹುದೆ? ಲೈಂಗಿಕ ಸಂಬಂಧ ಅನ್ನುವುದು ಪಾಪವೇ? ತಾನು ಅನುಭವಿಸುತ್ತಿರುವುದು ಆ ಹುಡುಗಾಟದ ಪ್ರಾಯದಲ್ಲಿ ಮೈಮನಗಳ ಸುಳಿಯಲ್ಲಿ ಸಿಕ್ಕಿ ಕೊಚ್ಚಿಕೊಂಡು ಹೋಗಿದ್ದ ಅಪರಾಧಕ್ಕಾಗಿಯೇ ಇರಬಹುದಲ್ವಾ? ಆದರೆ ಅದರಲ್ಲಿ ಸಮಪಾಲು ಅಥವಾ ಹೆಚ್ಚಿನ ಪಾಲೇ ಪಡೆಯಬೇಕಾಗಿದ್ದ ಭೋಜರಾಯರಿಗೆ ಏನೂ ಆಗಲಿಲ್ಲ. ಆ ದಿನಗಳಲ್ಲಿ ಅವರಿಗೆ ಬರ್ಕಾಡಿಯ ಸರ್ವೋದಯ ಅನುದಾನಿತ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯ ಕೆಲಸ ಸಿಕ್ಕಿ ಆಗಿತ್ತು. ಮುಂದೆ ಅವರು ಆ ಶಾಲೆಯ ಮುಖ್ಯೋಪಾಧ್ಯಾಯರಾಗಿ, ಶಿಸ್ತಿನ ಸಿಪಾಯಿ ಎಂಬ ಬಿರುದು ಪಡೆದು, ರಾಜ್ಯ ಮಟ್ಟದ ಶ್ರೇಷ್ಠ ಶಿಕ್ಷಕ ಪ್ರಶಸ್ತಿ ಪಡೆದು ಸಾರ್ವಜನಿಕ ಸನ್ಮಾನದೊಂದಿಗೆ ನಿವೃತ್ತರಾದರು. ಪಾಪ ಅಂಟಿದ್ದು ತನಗೊಬ್ಬಳಿಗೆಯೇ ಹಾಗಾದರೆ! ಈ ಪಾಪಕ್ಕೆ ಪರಿಹಾರವಿಲ್ಲವೆ ಎಂದು ಯೋಚಿಸಿದಳು. ಈಗ ಅನುಭವಿಸುತ್ತಿರುವುದು ಅದರ ಶಿಕ್ಷೆಯನ್ನು ಎಂದಾದರೆ ಈ ಪಾಪ ಮುಗಿದ ದಿನ ತಾನು ಗೊಟಕ್ ಎಂದು ಇದ್ದಕ್ಕಿದ್ದಂತೆ ಸತ್ತುಹೋದರೆ ಒಳ್ಳೆಯದು.

ಬೊಮ್ಮಿ ಹೀಗೆ ರಂಪಾಟ ಮಾಡುತ್ತಾ ಬಾಗಿಲಿನ ಮೂಲಕ ಒಳಗೆ ನೋಡುತ್ತ ಯಮುನಕ್ಕ ಕಾಣುತ್ತಿದ್ದಾಳೋ ಎಂದು ಗಮನಿಸುತ್ತಲೇ ಇದ್ದಳು. ಆದರೆ ಬಿಸಿಲಿನ ಝಳ ಇದ್ದುದರಿಂದ ಒಳಗಿನ ದೃಶ್ಯ ಕಾಣುತ್ತಿರಲಿಲ್ಲ. ಅದಕ್ಕಾಗಿ ಸ್ವಲ್ಪ ಸ್ವಲ್ಪವೇ ಮನೆಯ ಬಳಿ ಸಾರುತ್ತಾ ವಿವಿಧ ಕೋನಗಳಲ್ಲಿ ಒಳಗೆ ಇಣುಕುತ್ತಾ ಬೈಯುತ್ತಿದ್ದಳು: 'ನಿನ್ನಂಥ ಶೀಲವಿಲ್ಲದ ಹೆಂಗಸನ್ನು ಗಂಡನ ಮನೆಯವರು ಇಟ್ಟುಕೊಂಡಾರಾ? ಥೂ ಥೂ ಥೂ!! ಅದಕ್ಕೇ ಅಲ್ಲವೇ ಗಂಡ ನಿನ್ನನ್ನು ಓಡಿಸಿದ್ದು? ಯಾವ ಮುಖ ಇಟ್ಟುಕೊಂಡು ಬದುಕಿದ್ದಿ ನೀನು ರಂಡೆ?'